# ಬರೆಯುವೆ ನಿನಗಾಗಿ...

ನಿಮ್ನನಿಲೀಮಿತ ನೇತ್ರೇ, ಗುಡ್‌ಮಾರ್ನಿಂಗ್!

ಬೆಳಗಿನ ಜಾವಕ್ಕೇ ಎಚ್ಚರಾದವನಿಗೆ ಏನೋ ಒಂಥರಾ ಆಲಸ್ಯ, ಸುಮ್ಮಸುಮ್ಮನೇ ಮನಸ್ಸು ಉಲ್ಲಸಿತ, ನನ್ನ ಜೀವನದ ಮುಂದಿನಷ್ಟೂ ದಿನಗಳ ಹರವೂ ನಿರ್ಧಾರವಾಗಿದೆಯೇನೋ ಎಂಬಷ್ಟು ನಿರಾಳ, ಇಷ್ಟು ಬೇಗ 'ಎದ್ದೆ ಯಾಕೆ?' ಎಂದುಕೊಂಡು ಮಲಗಹೊರಟರೆ ನಿದ್ದೆಯೂ ದೂರ. ಹೊರಗಡೆ ಗದಗುಟ್ಟಿಸುವಷ್ಟು ಚಳಿ, ಇನ್ನೂ ಇರುಳುಗತ್ತಲು, ಬಿಳೀಬಿಳಿ ಇಬ್ಬನಿ, ಒಳಗಡೆ ನಾನು, ನನ್ನ ಗಿಟಾರು ಮತ್ತು ನಿನ್ನ ನೆನಪು...

ಇದು ಸಾಧ್ಯವಾಗುತ್ತದೆ ಅಂತಾ ನನಗೆ ಯಾವತ್ತೂ ಅನಿಸಿರಲಿಲ್ಲ...

ನಮ್ಮಿಬ್ಬರ ಭೇಟಿಯಾಗಿ ಹತ್ತಿರ–ಹತ್ತಿರ ಒಂದು ವರ್ಷ. ಅದನ್ನು ಭೇಟಿಯನ್ನುವುದಕ್ಕಿಂತ 'ವಿನಾಕಾರಣ ಒಬ್ಬರೊಬ್ಬರ ಕಣ್ಣಿಗೆ ಬಿದ್ದದ್ದು' ಎನ್ನಬೇಕು; ಯಾಕೆಂದರೆ ಒಂದು 'ಅಫಿಶಿಯಲ್' ಭೇಟಿ/ಪರಿಚಯ ಅಂತಾಗಿ, ನಾವು ಮಾತನಾಡಲು ಶುರುಮಾಡಿದ್ದೇ ನಾಲ್ಕಾರು ತಿಂಗಳ ನಂತರ. ಮೊದಲನೇ ನೋಟದಲ್ಲೇ ನನಗೆ ನೀನು ನಿಲುಕದ ನಕ್ಷತ್ರವಾಗಿ ಗೋಚರಿಸಿದ್ದೆ. ಆ ದಿನಗಳಲ್ಲಿ ಯಾವ ಹುಡುಗಿಯನ್ನು ನೋಡಿದರೂ ನನಗೆ 'ನಿಲುಕದ ನಕ್ಷತ್ರ'ವಾಗಿಯೇ ಕಾಣುತಿದ್ದಳು. ಹಾಗಿರುವಾಗ ನಿನ್ನಂತ ತಣ್ಣಗಿನ ಮಿಂಚುಗಣ್ಣಿನ, ಮುದ್ದು ಬೆಕ್ಕಿನ ನಯ–ನಾಜೂಕಿನ, ಹೆಚ್ಚೂಕಡಿಮೆ ಅಹಂಕಾರವೆನಿಸುವಷ್ಟು ಕಡಿಮೆ ಮಾತಿನ ಹುಡುಗಿಯ ನೋಡಿ ನಾನು ಸುಮ್ಮನೇ ನಿಡುಸುಯ್ಯುವುದಷ್ಟೇ ಸರಿ. ಅಂತೂ ಇಂತೂ ಯಾವಾಗಲೋ ಒಮ್ಮೆ ನನ್ನ ಸ್ನೇಹಿತರೆದುರು ಬಾಯಿ ತಪ್ಪಿ ಬಾಯಿ ಬಿಟ್ಟೆ! ಅವರೆಲ್ಲ ಗಹಗಹಿಸಿ ನಕ್ಕರು, ನಿನ್ನಂತಹ ಮಖೇಡಿಗೆ ಸರಿಯಾದ ಸ್ವಪ್ನ–ಜೋಡಿ ಎಂದರು ಮತ್ತು ನಮ್ಮೊಳಗೇ ನಿನ್ನ ಬಗ್ಗೆ ಮಾತನಾಡಿಕೊಳ್ಳಲು ಒಂದು ಕೋಡ್‌ವರ್ಡ್‌ನಂತಹ ಹೆಸರು ಕೊಟ್ಟುಕೊಂಡರು–ಮಾರ್ಜಾಲ ಸುಂದರಿ!

ಅವೆಲ್ಲ ಮಧುರ ಭಾವನೆಗಳಿಗೆ ಥ್ಯಾಂಕ್ಸ್...

ಕಾಲೇಜು ಮುಗಿಸಿ, ಕೆಲಸ ಹಿಡಿದು, ಜೀವನ ಯಾಂತ್ರಿಕವಾಗತೊಡಗಿದಾಗ ನನ್ನನ್ನು ಒಂಥರಾ ಒಂಟಿತನ ಕಾಡತೊಡಗಿತ್ತು. ಆದರೆ ಪ್ರತೀ ಚೆಂದನೆಯ ಹುಡುಗಿಯನ್ನೂ ನನ್ನೊಂದಿಗೇ–ನನ್ನ ವ್ಯಕ್ತಿತ್ವದೊಂದಿಗೇ ಅಳೆದು ತೂಗುವ ನನಗೆ ನನ್ನ ವ್ಯಕ್ತಿತ್ವ ನೀರಸವೆನಿಸಿ 'ನನಗಿಂತಲೂ ಒಳ್ಳೇ ಹುಡುಗ' ಆಕೆಗೆ ಸಿಗಬಹುದಲ್ಲವೇ ಎಂದೆನಿಸಿ ಬೇಜಾರಾಗಿ ಬಿಡುತ್ತಿತ್ತು. ಹಾಗಾಗಿ ನೀನಾಗೇ ಇದನ್ನೆಲ್ಲ ಶುರುಮಾಡುವ ತನಕ ನನಗೆ ನನ್ನ ಮೇಲೇ ಭರವಸೆಯಿರಲಿಲ್ಲ. ನಿಜವಾಗಿಯೂ ನೀನೇ ಶುರುಮಾಡಿದೆಯಾ? ಯಾತಕ್ಕೋಸ್ಕರ ಶುರುಮಾಡಿದೆ? ಇನ್ನೂ ಸರಿಯಾಗಿ ತಿಳಿಯೆ ನಾನು. ಸಾಲದ್ದಕ್ಕೆ, ಮೊದಮೊದಲು ಇದನ್ನೆಲ್ಲ ಕೇಳಿ ಸ್ನೇಹಿತೆಯೊಬ್ಬಳು ಬೈದುಬಿಟ್ಟಿದ್ದಳು, 'ನೀವು ಹುಡುಗರೇ ಇಷ್ಟು, ಯಾವ್ಯಾವುದಕ್ಕೋ ಇಲ್ಲಸಲ್ಲದ ಅರ್ಥಗಳನ್ನೆಲ್ಲ ಕಟ್ಟಿ ಸುಮ್ಮನೇ ಖುಷಿಪಟ್ಕೋತೀರಿ. ನಾವು ಹುಡ್ಗೀರು ಮಾಡೋ ಎಷ್ಟೋ ಕೆಲಸಗಳಿಗೆ ಅರ್ಥವೇ ಇರೋಲ್ಲ!' ಹಾಗಿದ್ದರೂ ನಾನು 'ಇದರಲ್ಲಿ' ಅರ್ಥವಿದ್ದೇ ಇದೆ ಎಂದು ಹಠ ಹಿಡಿದ ಮೇಲೆ ಅವಳೇ ನಮ್ಮಿಬ್ಬರ ನಡುವಿನ ಮೇಘ–ಸಂದೇಶವಾದಳು, ನನ್ನ ಬೇಹುಗಾರ್ತಿಯಾದಳು!

ನಂತರವೇ ಜೀವನ ನೀರಸದಿಂದ ರಸಾನುಭೂತಿಯಾಗತೊಡಗಿದ್ದು...

ನಿನ್ನ ಫೋನ್ ನಂಬರ್ ಕೇಳಲೂ ಆಗದೇ ಬೆಪ್ಪನಂತೆ ತೊಳಲಾಡಿದ್ದೆ, ಮತ್ತದೇ ಸ್ನೇಹಿತೆ ನನ್ನ ಸಹಾಯಕ್ಕೆ ಬಂದಳು, ನನ್ನನ್ನು 'ಬೆಪ್ಪುತಕ್ಕಡಿ'ಯೆಂದು ಬೈದಳು. ಅವಳ ಸಲಹೆಯ ಮೇರೆಗೇ ಮೀನಾಮೇಷ ಎಣಿಸಿ ನಿನಗೆ ಮೇಯ್ಲ್ ಮಾಡಿದೆ ಮತ್ತು ನೀನು (ನಾನೆಣಿಸಿದ್ದಕಿಂತ) ಸರಾಗವಾಗಿ ಫೋನ್ ನಂಬರ್ ಕೊಟ್ಟೆ, ನನಗವತ್ತು ಸಕತ್ ಖುಷಿ! ಪ್ರತೀ ಹಗಲೂ, ಪ್ರತೀ ರಾತ್ರಿ, ಪ್ರತೀ ಕನಸೂ ಪ್ರತೀ ನನಸೂ, ಪ್ರತೀ ನೆನಪೂ ಇಷ್ಟೊಂದು ಪರಿಣಾಮಕಾರಿ, ಇಷ್ಟೊಂದು ಮಧುರ ಅಂತಾ ನನಗೆ ಯಾವತ್ತೂ ಅನಿಸಿರಲಿಲ್ಲ; ಕಣ್ಣಿಗೆ ಬಂದವಷ್ಟೇ ಕನಸು ಕಾಣುತ್ತಿದ್ದ ನನಗೆ ಕನಸು ನೇಯುವುದನ್ನು–ಕಟ್ಟುವುದನ್ನು ಕಲಿಸಿಕೊಟ್ಟೆ ನೀನು. ನನ್ನ ಜೀವನ ಈಗ ಯಾಂತ್ರೀಕೃತವಲ್ಲ; ಮಂಜುಗತ್ತಲಲ್ಲಿ ದೇದೀಪ್ಯಮಾನವಾದ ಬೆಳಕೊಂದು ದಾರಿ ತಪ್ಪಿದ ಹರಿಗೋಲಿಗೆ ದೂರತೀರದ ಗಮ್ಯವನ್ನು ತೋರಿಸುವಂತೆ ನನ್ನನ್ನು ನನ್ನ ಜೀವನದ ಗಮ್ಯಮುಖಿಯಾಗಿಸಿದೆ ನೀನು. ಜೀವನ ಕೊಂಡೊಯ್ಯುತ್ತಿದ್ದ ಹಾದಿಯಲ್ಲೇ ತಲೆ ತಗ್ಗಿಸಿ ನಡೆಯುತ್ತಿದ್ದೆ ನಾನು; ಈಗ ತಲೆಯೆತ್ತಿ ನನ್ನ ಹಾದಿಯನ್ನು ಅದರ ಸೊಬಗನ್ನು, ಓರೆಕೋರೆಗಳನ್ನು ನೋಡಿ–ಅರ್ಥಮಾಡಿಕೊಳ್ಳಲಾರಂಭಿಸಿದ್ದೇನೆ; ಹೆಚ್ಚು ನಗಲಾರಂಭಿಸಿದ್ದೇನೆ; ಹುಡುಗಿಯರ ತಲೆಯೆತ್ತಿ ನೋಡುವಷ್ಟು ಧೈರ್ಯ ಬಂದಿದೆ :)

ಯಾವುದೊಂದಾದರೂ ಹುಡುಗಿಗೆ ನಾನು ಖಂಡಿತಾ 'ವರ್ತಿ' ಎನ್ನಿಸುವ ಆತ್ಮ ವಿಶ್ವಾಸ ಮೂಡಿದೆ! ಮತ್ತು ನನ್ನೊಬ್ಬ ಹೊಸಾ ಸ್ನೇಹಿತ ಹೇಳುವಂತೆ ನಿನ್ನ ಪ್ರೇಮದಲ್ಲಿ ನಾನೀಗ 'ಮಲ್ಲಿಗೆ ಹೂವನ್ನು ತಿನ್ನಲಾರಂಭಿಸಿದ್ದೇನೆ'!

ಇಷ್ಟೆಲ್ಲ ಆದರೂ ನನ್ನ ಪ್ರೇಮದ ಬಗ್ಗೆ ಮಾತನಾಡಲು ಇನ್ನೂ ಭಯ ನನಗೆ, ಏನೋ ಹಿಂಜರಿಕೆ. ಆ ಎರಡೂಕಾಲು ಅಕ್ಷರಗಳಲ್ಲಿ ಅಡಗಿರಬಹುದಾದ ಆಸೆಗಳು, ಕನಸುಗಳು, ಕಲ್ಪನೆಗಳು, ಭರವಸೆಗಳು ಎಲ್ಲವೂ ನನ್ನನ್ನು ತಮಾಷೆ ಮಾಡುತ್ತವೆ, ಹೆದರಿಸುತ್ತವೆ ಮತ್ತು ಇಂತಹ ಬೆಳಗುಗಳಲ್ಲಿ ಸವಿಯಾದ ದುಃಸ್ವಪ್ನ ನೀಡಿ ನನ್ನನ್ನೆಬ್ಬಿಸಿ ಕೂರಿಸುತ್ತವೆ, ನಿದ್ದೆ ಬಾರದಂತೆ ಮಾಡುತ್ತವೆ!

ಯಾವ ಕಾಣಿಕೆ ನೀಡಲಿ ನಿನಗೆ?...

ಬೇರೆಯವರಿಗೆ ಕಿಂಚಿತ್ ಅನಿಸಬಹುದಾದ ಬದಲಾವಣೆ ಇದು, ಆದರೆ ನನಗೆ ನನ್ನ ಜೀವನದ ಹಾದಿಯನ್ನೇ ಬದಲಾಯಿಸಿದ ಬದಲಾವಣೆ. ಹಾಗಾಗಿಯೇ ಇವತ್ತು ಅದಕ್ಕೆ ಕಾರಣೀಭೂತಳಾದ ನಿನ್ನನ್ನು ಕೇಳುತ್ತಿದ್ದೇನೆ ಗೆಳತಿ, ನಿನಗೇನು ಕಾಣಿಕೆ ಕೊಡಲಿ? ನಿನಗೆ ನನ್ನೆಡೆಗಿರುವ ಭಾವನೆಗಳ ಬಗ್ಗೆ ನನಗಿನ್ನೂ ಗೊತ್ತಿಲ್ಲ, ನಿನ್ನೆಡೆಗಿರುವ ಭಾವನೆಗಳನ್ನು ಹೇಳಿಕೊಳ್ಳುವ ಧೈರ್ಯವಿನ್ನೂ ಬಂದಿಲ್ಲ, ನನ್ನವುಗಳೊಳಗೆ ನೀನಿರುವಂತೆ ನಿನ್ನ ಕನಸುಗಳೊಳಗೆ ನಾನಿದ್ದೇನೆಯೇ? ಗೊತ್ತಿಲ್ಲ! ಆದರೂ ಈ ಸುಂದರ ಬೆಳಗಿನಲ್ಲಿ ಇನ್ನೂ ಸಕ್ಕರೆ ನಿದ್ದೆಯಲ್ಲಿ ಮುಳುಗಿ ಸವಿಗನಸ ಕನಸಿಸುತ್ತಿರಬಹುದಾದ ನಿನಗೆ ನನ್ನ ಹಾರೈಕೆ – ನಿನ್ನ ಕನಸು ಕಂಗಳ ಅವೆಲ್ಲ ಸವಿಕನಸುಗಳಿಗೆ ನನ್ನದೊಂದು ಸುಂದರ ಕನಸಿರಲಿ... ನಿನ್ನೆಲ್ಲ ನೆನಪುಗಳ ನಡುವೆ ಪ್ರತ್ಯೇಕವಾದ ನನ್ನೊಂದು ನೆನಪಿರಲಿ... ನಿನ್ನೆಲ್ಲ ಕನಸುಗಳ ಸಾಕಾರದಲ್ಲಿ ನನ್ನದೊಂದು ಪಾಲಿರಲಿ ಮತ್ತು ನಮ್ಮಿಬ್ಬರ ಕನಸುಗಳನೊಟ್ಟಿಗೇ ನೇಯ್ದು ಹೆಣೆಯುವ ಕಾಲ ಬಹುಬೇಗ ಬರಲಿ...

**ಬರೆಯುವೆ ನಿನಗಾಗಿ, ಹೃದಯದಿ ಹಿತವಾಗಿ**
**ಪ್ರಣಯದ ಸಂಕೇತವಾಗಿ, ಒಲವಿಂದ ಪ್ರೇಮಗೀತೆ... ಓ ಗೆಳತೀ**

## ಹ್ಯಾಪಿ ವ್ಯಾಲಂಟೈನ್ಸ್ ಡೇ